ದೂರವಾಣಿ: 22341691

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಸಂಖ್ಯೆ: ಮುವಿಪ/ಉವಿಪ-1/ **42535** /12-13

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಂ: 32/2-1, ನೇ ಮಹಡಿ,
ಕ್ರೆಸೆಂಟ್ ಟವರ್, ಕ್ರೆಸೆಂಟ್ ರೋಡ್,
ಬೆಂಗಳೂರು 560 001

ದಿನಾಂಕ: **11-03-2013**

## "ಅಧಿಕೃತ ಜ್ಞಾಪನ ಪತ್ರ"

ವಿಷಯ: ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ನ್ನು ಜಾರಿಗೊಳಿಸು ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 01.10.2012
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 26.02.2013
3. ಸರ್ಕಾರಿ ಪತ್ರದ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 02.03.2013

****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ರ ನಿಯಮ 5(2) ರಡಿಯಲ್ಲಿರುವಂತೆ ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಜಿಲ್ಲಾ ಮಟ್ಟದಲ್ಲಿರುವ ಉಪ ವಿದ್ಯುತ್ ಪರಿವೀಕ್ಷಕರುಗಳು (ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ) ಮೇಲಿನ ನಿಯಮದಲ್ಲಿರುವಂತೆ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿದ್ಯುತ್ ಮೇಲ್ವಿಚಾರಕರ ರಹದಾರಿಗಳು, ತಂತಿ ಕೆಲಸಗಾರರ ರಹದಾರಿಗಳು, ವಿಶೇಷ ತಂತಿ ಕೆಲಸಗಾರರ ರಹದಾರಿಗಳ ಹೊಸದು ಮತ್ತು ನವೀಕರಣ ಅರ್ಜಿಗಳನ್ನು ಸ್ವೀಕರಿಸುವ/ಪರಿಶೀಲಿಸುವ ಕೆಲಸಗಳನ್ನು ಅವರುಗಳು ಹಾಲಿ ನಿರ್ವಹಿಸುವ ಕಛೇರಿ ಕೆಲಸಗಳೊಂದಿಗೆ ಹೆಚ್ಚುವರಿಯಾಗಿ ನಿರ್ವಹಿಸಲು ಈ ಮೂಲಕ ಸೂಚಿಸಲಾಗಿದೆ. ಮೇಲ್ಕಂಡ ನಿಯಮಗಳಿಗೆ ಸಂಬಂದಿಸಿದ ಉಲ್ಲೇಖ 1) ಮತ್ತು 2) ರಲ್ಲಿರುವ ಸರ್ಕಾರದ ಆದೇಶದ ಪ್ರತಿಗಳನ್ನು ಈ ಪತ್ರದೊಂದಿಗೆ ಸೂಕ್ತ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಲಾಗಿದೆ.

1) ಉಪ ವಿದ್ಯುತ್ ಪರಿವೀಕ್ಷಕರುಗಳು ಆಯಾ ತಿಂಗಳ ಪ್ರಾರಂಭದಿಂದ ಅಂತ್ಯದ ದಿನಾಂಕದವರೆಗೆ ಅರ್ಜಿಗಳನ್ನು ಸ್ವೀಕರಿಸುವುದು ಹಾಗು ಈ ರೀತಿ ಸ್ವಿಕರಿಸಿದ ಅರ್ಜಿಗಳಿಗೆ ಸೂಕ್ತ ಸ್ವೀಕೃತಿಯನ್ನು ಅರ್ಜಿದಾರರಿಗೆ ನೀಡುವುದು.

2) ಈ ರೀತಿ ಸ್ವಿಕರಿಸಿದ ಎಲ್ಲಾ ರೀತಿಯ ಹೊಸದು ಮತ್ತು ನವೀಕರಣ ಅರ್ಜಿಗಳನ್ನು ಪರಿಶೀಲಿಸಿ ಮುಂದಿನ ತಿಂಗಳ 7ನೇ (ಏಳನೇ) ತಾರೀಖಿನೊಳಗೆ ಸೂಕ್ತ ಟಿಪ್ಪಣಿಯೊಂದಿಗೆ ಕೇಂದ್ರ ಕಚೇರಿಗೆ ರವಾನಿಸುವುದು.

3) ಮೇಲಿನ ನಿಯಮಗಳ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳ ವಿವರಗಳನ್ನು ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ವಿಶೇಷ ಕಡತವನ್ನು (Ledger) ತೆರೆದು ಅದರಲ್ಲಿ ನಮೂದಿಸತಕ್ಕದ್ದು, ಈ ರೀತಿಯ ನಮೊದನೆಗಳನ್ನು ಉಪ ವಿದ್ಯುತ್ ಪರಿವೀಕ್ಷಕರವರು ಚಿಕ್ಕ ಸಹಿಯೊಂದಿಗೆ ದೃಢೀಕರಿಸುವುದು.

4) ನಿಯಮ 35ರ ಅಡಿಯಲ್ಲಿರುವಂತೆ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿಕೆಲಸಗಾರರ ರಹದಾರಿಗಳ ಹಿಂಬರಹ ಮಾಡುವುದು ಮತ್ತು ಕೋರಿಕೆಯ ಮೇರೆಗೆ ಹಿಂಬರಹಗಳನ್ನು ರದ್ದುಪಡಿಸುವ ಕೆಲಸಗಳ್ನು ಅರ್ಜಿ ಸಲ್ಲಿಸಿದ ಎರಡು ದಿನಗಳ ಒಳಗೆ ವಿಲೇವಾರಿಮಾಡುವುದು.

5) ಎಲ್ಲಾ ರೀತಿಯ ಹಿಂಬರಹಗಳನ್ನು ಮತ್ತು ಕೋರಿಕೆಯ ಮೇರೆಗೆ ಹಿಂಬರಹಗಳನ್ನು ರದ್ದುಪಡಿಸುವ ವಿವರಗಳನ್ನು ಕಡ್ಡಾಯವಾಗಿ ರಹದಾರಿ ಪುಸ್ತಕದಲ್ಲಿ ಮತ್ತು ಸಂಬಂಧಿಸಿದ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಪುಸ್ತಕದಲ್ಲಿ ಬರೆಯಬೇಕು ಮತ್ತು ಉಪ ವಿದ್ಯುತ್ ಪರಿವೀಕ್ಷಕರ, ಸಹಿ ಮಾಡಿರಬೇಕು.

6) ವಿಳಾಸ ದೃಢೀಕರಣ, ಬ್ಯಾಂಕ್ ಶಕ್ತಿ ಪತ್ರದ ಅಂಡರ್ ಟೇಕಿಂಗ್ ಮತ್ತು ಇತರೆ ವಿಷಯಗಳಿಗೆ ನೀಡುವ ದೃಢೀಕರಣ (Affidavit) ದಾಖಲೆಗಳು ಪತ್ರಗಳು ಕರ್ನಾಟಕ ಸ್ಟಾಂಪ್ ಆಕ್ಟ್ 1957 ರ ಅಡಿಯಲ್ಲಿರುವಂತೆ ಕನಿಷ್ಠ ರೂ.100/-(ನೂರು) ರುಪಾಯಿ ಮುಖಬೆಲೆಯ ಛಾಪಾ ಕಾಗದದಲ್ಲಿ ಇರಬೇಕು ಮತ್ತು ಅಂತಹ ದೃಢೀಕರಣ ದಾಖಲೆಗಳನ್ನು ನೋಟರಿಯವರಿಂದ ದೃಢೀಕೃತವಾಗಿರಬೇಕು.

7) ಎಲ್ಲಾ ಅರ್ಜಿಗಳ ಕಡತದೊಂದಿಗೆ ರೂ.30/- ಅಂಚೆ ಚೀಟಿ ಅಂಟಿಸಸಿದ ಸ್ವ ವಿಳಾಸ ಬರೆದಿರುವ ಲಕೋಟೆಯನ್ನು ಅಳವಡಿಸಿರಬೇಕು, ಸದರಿ ಲಕೋಟೆಯ ಮೇಲೆ ಅರ್ಜಿದಾರರ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಬರೆದಿರಬೇಕು.

8) ಎಲ್ಲಾ ರೀತಿಯ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ, ವಿದ್ಯುತ್ ಮೇಲ್ವಿಚಾರಕರ ರಹದಾರಿಯ, ತಂತಿ ಕೆಲಸಗಾರರ ರಹದಾರಿಯ ಮತ್ತು ವಿಶೇಷ ತಂತಿ ಕೆಲಸಗಾರರ ರಹದಾರಿಯ ಹೊಸ ಅಥವಾ ನವೀಕರಣ ಅರ್ಜಿಗಳನ್ನು ಸೂಕ್ತ ಅಳತೆಯ ಕಡತದೊಂದಿಗೆ (File) ಮಾತ್ರ ಸ್ವೀಕರಿಸುವುದು.

9) ಎಲ್ಲಾ ಕಡತಗಳು (Files) 34x25 cm ಅಳತೆಯ ಫೈಲಿಂಗ್ ಸಿಸ್ಟಮ್ (Filling system) ಗಳಾಗಿ ಬಳಸುವ ದಪ್ಪ ಇರುವ (Thickest File) ಫೈಲ್‌ಗಳಾಗಿರಬೇಕು.

10) ಎಲ್ಲಾ ರೀತಿಯ ಕಡತಗಳ (File) ಮೇಲೆ ಅರ್ಜಿದಾರರ ಹೆಸರು, ಸಂಸ್ಥೆಯ ಹೆಸರು, ವಿಳಾಸ ಮತ್ತು ದೂರವಾಣಿಯ ಸಂಖ್ಯೆಯನ್ನು (ಸ್ಥಿರ ಅಥವಾ ಮೊಬೈಲ್) ಕಡ್ಡಾಯವಾಗಿ ಬರೆದಿರಬೇಕು ಹಾಗೂ ಮೇಲಿನ ವಿವರಗಳಲ್ಲದೇ ಬೇರೆ ಇನ್ನಾವುದೆ ವಿವರಗಳನ್ನು ಮುಖ ಪುಟದಲ್ಲಿ ಬರೆಯಬಾರದು.

11/3/13
ಮುಖ್ಯ ವಿದ್ಯುತ್ ಪರಿವೀಕ್ಷಕರು
Chief Electrical Inspector to Govt.
Government of Karnataka,
Bangalore - 560 009

ಪ್ರತಿಯನ್ನು ಮಾಹಿತಿಗಾಗಿ ರವಾನಿಸಲಾಗಿದೆ,
ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಎಲ್ಲಾ ವಿದ್ಯುತ್ ಪರಿವೀಕ್ಷಕರು,

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ,
ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು

ದೂರವಾಣಿ: 22341691
ಫ್ಯಾಕ್ಸ್ : 22341692

ಕರ್ನಾಟಕ ಸರ್ಕಾರ
**(ವಿದ್ಯುತ್ ಪರಿವೀಕ್ಷಣಾಲಯ)**

ಸಂಖ್ಯೆ : ವಿಪಇ/ಎಲ್ ಇ ಸಿ 02/ 05 /13-14

ಮುಖ್ಯ ವಿದ್ಯುತ್ ಪರಿವೀಕ್ಷರ ಕಛೇರಿ
#32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು 560 001
ದಿನಾಂಕ: 13/6/13

# ಸುತ್ತೋಲೆ

ವಿಷಯ: ವಿದ್ಯುತ್ ಗುತ್ತಿಗೆದಾರರ ಪರವಾನಗಿ **ನವೀಕರಣ** ಅರ್ಜಿಯೊಂದಿಗೆ ವಿದ್ಯುತ್ ಸ್ಥಾವರಗಳ ಕಾರ್ಯನಿರ್ವಹಿಸಿದ ಬಗ್ಗೆ **"ಕಾರ್ಯನಿರ್ವಹಣಾ ಪ್ರಮಾಣ ಪತ್ರ"** (Work done certificate)ಸಲ್ಲಿಸುವ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಸಂ; ಇಎನ್ 96 ಇಬಿಎಸ್ 2007 ದಿನಾಂಕ; 1.10.2012.
2.ಸರ್ಕಾರಿ ಆದೇಶ ಸಂ; ಇಎನ್ 96 ಇಬಿಎಸ್ 2007 ದಿನಾಂಕ; 26.2.2013.
3. ದಿನಾಂಕ; 29.5.2013 ರಂದು ನಡೆದ 1ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳ ಸಭೆಯ ನಡಾವಳಿಗಳು.

*******

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿದ್ಯುತ್ ಮೇಲ್ವಿಚಾರಕರ, ತಂತಿ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 13 (3) (ಜೆ)ರ ಅಡಿಯಲ್ಲಿರುವಂತೆ ಮಾನ್ಯತಾ ಅವಧಿ ಹೊಂದಿರುವ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳನ್ನು ನವೀಕರಣಕ್ಕಾಗಿ ಅರ್ಜಿ ನಮೂನೆ –'ಡಿ'ರಲ್ಲಿ ಸಲ್ಲಿಸುವಾಗ ವಿದ್ಯುತ್ ಗುತ್ತಿಗೆದಾರರುಗಳು ಹಿಂದೆ ನಿರ್ವಹಿಸಿ ಸಂಪೂರ್ಣಗೊಳಸಿದ ವಿದ್ಯುತ್ ಸ್ಥಾವರಗಳ ಬಗ್ಗೆ **"ಕಾರ್ಯನಿರ್ವಹಣಾ ಪ್ರಮಾಣ ಪತ್ರ"** (Work done certificate) ಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಕಾರ್ಯನಿರ್ವಹಣಾ ಪ್ರಮಾಣ ಪತ್ರಗಳನ್ನು (Work done certificate) ಸಂಬಂಧಿಸಿದ **ವಿದ್ಯುತ್ ಸರಬರಾಜುದಾರ ಕಂಪನಿಗಳು / ಸಂಸ್ಥೆಗಳು ಅಥವಾ ವಿದ್ಯುತ್ ಉತ್ಪಾದನಾ ಕಂಪನಿ / ಸಂಸ್ಥೆಗಳು ಅಥವಾ ವಿದ್ಯುತ್ ಸ್ಥಾವರಕ್ಕೆ ಸಂಬಂಧಿಸಿದ ಪ್ರಾಧಿಕಾರಿಗಳು ಅಥವಾ ವಿದ್ಯುತ್ ಸ್ಥಾವರದ ಮಾಲೀಕರುಗಳು ನೀಡಬಹುದಾಗಿರುತ್ತದೆ ಅಥವಾ ಮೇಲ್ಕಂಡ ಪ್ರಾಧಿಕಾರಗಳಿಂದ ಪ್ರಮಾಣ ಪತ್ರಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ವಿದ್ಯುತ್ ಗುತ್ತಿಗೆದಾರರು ತಾವೇ ಸ್ವತಃ ಪ್ರಮಾಣೀಕರಿಸಿಕೊಳ್ಳಬಹುದಾಗಿರುತ್ತದೆ (Self declaration).**

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿದ್ಯುತ್ ಮೇಲ್ವಿಚಾರಕರ, ತಂತಿ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 13ರ ಅಡಿಯಲ್ಲಿರುವಂತೆ ನಿಗಧಿತ ಸಮಯದಲ್ಲಿ ವಿದ್ಯುತ್ ಗುತ್ತಿಗೆದಾರರು ಪರವಾನಗಿಯ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವಾಗ ಸದರಿ ನಿಯಮಗಳ ಉಪ ನಿಯಮ 13 (3) (ಜೆ)ರ ಅಡಿಯಲ್ಲಿರುವಂತೆ ವಿದ್ಯುತ್ ಸ್ಥಾವರಗಳ ಕಾರ್ಯನಿರ್ವಹಿಸಿದ ಬಗ್ಗೆ **"ಕಾರ್ಯನಿರ್ವಹಣಾ ಪ್ರಮಾಣ ಪತ್ರ"** (Work done certificate)ಪತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಿರುವ ಬಗ್ಗೆ ಸಂಬಂಧಿಸಿದ ಉಪ ವಿದ್ಯುತ್ ಪರಿವೀಕ್ಷಕರುಗಳು ಪರಿಶೀಲಿಸಿ ಸೂಕ್ತ ಮಾಹಿತಿಯೊಂದಿಗೆ ಪರಿಶೀಲನಾ ಪಟ್ಟಿಯಲ್ಲಿ ನಮೂಧಿಸಿ ಧೃಡೀಕರಿಸಿ ಸಲ್ಲಿಸಬೇಕಾಗಿ ಸೂಚಿಸಲಾಗಿದೆ.

ಈ ಸುತ್ತೋಲೆಯನ್ನು ದಿನಾಂಕ; 29.5.2013 ರಂದು ನಡೆದ 1ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ನಿರ್ಣಯ ಸಂಖ್ಯೆ 08 ರಡಿಯಲ್ಲಿರುವಂತೆ ಹಾಜರಿದ್ದ ಸದಸ್ಯರು ತೀರ್ಮಾನಿಸಿರುವ ಮೇರೆಗೆ ಹೊರಡಿಸಲಾಗಿದೆ.

13/6/13
ಮುಖ್ಯ ವಿದ್ಯುತ್ ಪರಿವೀಕ್ಷಕರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:
1. ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳಿಗೆ
2. ಎಲ್ಲಾ ವಿದ್ಯುತ್ ಪರಿವೀಕ್ಷಕರುಗಳಿಗೆ.
3.ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳಿಗೆ.
4.ಸಹಾಯಕ ವಿದ್ಯುತ್ ಪರಿವೀಕ್ಷಕರು (ಸ್ವತಂತ್ರ).

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ದೂರವಾಣಿ: 22341691

ಸಂ: ವಿಪಇ/ಎಲ್.ಇ.ಸಿ -13/ 15117/13-14

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
ನಂ.32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು 560 001.
ದಿನಾಂಕ : 17-07-2013

## ಸುತ್ತೋಲೆ

ವಿಷಯ: ವಿದ್ಯುತ್ ಸ್ಥಾವರಗಳ ಕಾರ್ಯಸಮಾಪನ ಮತ್ತು ಪರೀಕ್ಷಾ ವರದಿಯೊಂದಿಗೆ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ, ವಿದ್ಯುತ್ ಮೇಲ್ವಿಚಾರಕರ ರಹದಾರಿಯ ಪ್ರತಿಗಳು ಹಾಗೂ ರಹದಾರಿಯ ನೇಮಕ ಮತ್ತು ಹಿಂಬರಹ ಮಾಡಿಸಿಕೊಂಡಿರುವ ಬಗ್ಗೆ ಪ್ರತಿಗಳನ್ನು ನೀಡುವ ಕುರಿತು.

ಉಲ್ಲೇಖ:1. ಈ ಕಚೇರಿ ಸುತ್ತೋಲೆ ಸಂ: ಮುವಿಪ/ಉಮುವಿಪ/ವಿಪ(ಪ)/5463-5546/ 2006-07 ದಿ: 1.3.2007.
2. ಈ ಕಚೇರಿ ಸುತ್ತೋಲೆ ಸಂ: ಮುವಿಪ/ಉಮುವಿಪ/ವಿಪ(ಪ)/4032-70/ 2007-08 ದಿ: 1.9.2007.
3. ಈ ಕಚೇರಿ ಸುತ್ತೋಲೆ ಸಂ: ಮುವಿಪ/ ವಿಪ(ಪ)/1-59/08-09 ದಿ: 2.4.2008.
4. ಈ ಕಚೇರಿ ಸುತ್ತೋಲೆ ಸಂ: ಮುವಿಪ/ಉಮುವಿಪ/ವಿಪ(ಪ)/43417-41/ 2008-09 ದಿ: 20.3.2009.
5.ಈ ಕಚೇರಿ ಸುತ್ತೋಲೆ ಸಂ: ಮುವಿಪ/ ಉವಿಪ-1/10840/ 2010-11 ದಿ: 6.7.2010.
6. ಈ ಕಚೇರಿ ಸುತ್ತೋಲೆ ಸಂ: ಮುವಿಪ/ ಉವಿಪ-1/2122-63/ 2010-11 ದಿ: 29.7.2010.
7. ಈ ಕಚೇರಿ ಸುತ್ತೋಲೆ ಸಂ: ಮುವಿಪ/ ಉವಿಪ-1/2257-332/ 2010-11 ದಿ: 9.8.2010.

*****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 10, 11 ಮತ್ತು 12ರ ಅಡಿಯಲ್ಲಿರುವಂತೆ ಈ ಇಲಾಖೆಯಿಂದ ಅಧಿಕೃತವಾಗಿ ವಿದ್ಯುತ್ ಗುತ್ತಿಗೆದಾರರ ಪರವಾನಗಿಯನ್ನು ಪಡೆದಿರುವ ಗುತ್ತಿಗೆದಾರರು, ಸದರಿ ನಿಯಮಗಳಡಿಯಲ್ಲಿನ ನಿಯಮ 19 ಮತ್ತು 35 ರಲ್ಲಿರುವಂತೆ, ವಿದ್ಯುತ್ ಗುತ್ತಿಗೆದಾರರು ಅಧಿಕೃತವಾಗಿ ವಿದ್ಯುತ್ ಮೇಲ್ವಿಚಾರಕರ ರಹದಾರಿ ಹೊಂದಿರುವಂತಹ ವ್ಯಕ್ತಿಗಳನ್ನು ನೇಮಿಸಿಕೊಂಡು ಹಿಂಬರಹ ಮಾಡಿಸಿಕೊಂಡಿರಬೇಕಾಗಿರುತ್ತದೆ. ವಿದ್ಯುತ್ ಗುತ್ತಿಗೆದಾರರು ಯಾವುದೇ ವಿದ್ಯುತ್ ಸ್ಥಾವರದ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸುವ ಮೊದಲು ಮೇಲ್ಕಂಡಂತೆ ನಿಯಮ 35 ರಲ್ಲಿರುವಂತೆ ಕಡ್ಡಾಯವಾಗಿ ವಿದ್ಯುತ್ ಗುತ್ತಿಗೆದಾರರ ಪರವಾನಗಿಗೆ, ವಿದ್ಯುತ್ ಮೇಲ್ವಿಚಾರಕರು / ತಂತಿ ಕೆಲಸಗಾರರ ರಹದಾರಿಗಳ ಹಿಂಬರಹ ಮಾಡಿಸಿಕೊಂಡಿರಬೇಕು ಹಾಗೂ ಅವರುಗಳು ವಿದ್ಯುತ್ ಸ್ಥಾವರಗಳ ಅನುಮೋದನೆಗಾಗಿ ಅರ್ಜಿ ಸಲ್ಲಿಸುವಾಗ ಕಾರ್ಯಸಮಾಪನ ಮತ್ತು ಪರೀಕ್ಷಾ ವರದಿಯೊಂದಿಗೆ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ, ವಿದ್ಯುತ್ ಮೇಲ್ವಿಚಾರಕರ ರಹದಾರಿಯ ಮತ್ತು ರಹದಾರಿಯ ಹಿಂಬರಹಗೊಂಡಿರುವ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.

ವಿದ್ಯುತ್ ಸರಬರಾಜು ಕಂಪನಿಗಳ ಕೆಲವು ಉಪವಿಭಾಗಗಳಲ್ಲಿ ಹೆಚ್ಚಿನ ಪ್ರಕರಣಗಳಲ್ಲಿ ವಿದ್ಯುತ್ ಗುತ್ತಿಗೆದಾರರುಗಳು ಅಧಿಕೃತ ರಹದಾರಿ ಹೊಂದಿರುವ ವಿದ್ಯುತ್ ಮೇಲ್ವಿಚಾರಕರನ್ನು ನೇಮಿಸಿಕೊಂಡು- ಅವರ ರಹದಾರಿಯನ್ನು ತಮ್ಮ ಪರವಾನಗಿಗಳಗೆ ಹಿಂಬರಹ ಮಾಡಿಸಿಕೊಳ್ಳದೆ ವಿದ್ಯುತ್ ಮೇಲ್ವಿಚಾರಕರ ನಕಲಿ ಸಹಿ ಮಾಡಿ, ನಕಲಿ ರಹದಾರಿ ಮತ್ತು ಹಿಂಬರಹದ ದಾಖಲೆ ಸೃಷ್ಟಿಸಿ, ಮತ್ತು ವಿದ್ಯುತ್ ಮೇಲ್ವಿಚಾರಕರಿಂದ ಖಾಲಿ ಕಾರ್ಯಸಮಾಪನ ವರದಿಗೆ ಸಹಿ ಪಡೆದುಕೊಂಡು, ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ಮಾನ್ಯತಾ ಅವಧಿ ಗತಿಸಿದ ನಂತರವೂ ಸಹ ಕಾರ್ಯಸಮಾಪನ ಮತ್ತು ಪರೀಕ್ಷಾ ವರದಿ ಸಲ್ಲಿಸಿ ವಿದ್ಯುತ್ ಸಂಪರ್ಕ ಪಡೆಯುತ್ತಿರುವುದು ಹಾಗೂ ಕಾರ್ಯ ಸಮಾಪನ ಮತ್ತು ಪರೀಕ್ಷಾ ವರದಿಯಲ್ಲಿ ವಿದ್ಯುತ್ ಗುತ್ತಿಗೆದಾರರ ಮತ್ತು ವಿದ್ಯುತ್ ಮೇಲ್ವಿಚಾರಕರವರ ಪರವಾನಗಿ / ರಹದಾರಿಗಳ ಸಂಖ್ಯೆ ಮತ್ತು ಮಾನ್ಯತಾ ಅವಧಿ ಬರೆಯದೇ ಇರುವುದು ಕಂಡು ಬಂದಿರುತ್ತದೆ. ಈ ರೀತಿ ಇರುವಂತಹ ಅರ್ಜಿಗಳನ್ನು ಸ್ವೀಕರಿಸಿ, ವಿದ್ಯುತ್ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ನೀಡುವುದರಿಂದ ವಿದ್ಯುತ್ ಸ್ಥಾವರದ ಸುರಕ್ಷತೆಯ ಬಗ್ಗೆ ಅನಧಿಕೃತ ವ್ಯಕ್ತಿಗಳಿಂದ ದೃಢೀಕರಣ ಪಡೆದಂತಾಗುತ್ತದೆ ಹಾಗು ಭಾರತೀಯ ವಿದ್ಯುತ್ ನಿಯಮ 1956 ರ ನಿಯಮ 45 ಹಾಗು ಹೊಸದಾಗಿ ರಚಿಸಿರುವ ಕೇಂದ್ರಿಯ ವಿದ್ಯುತ್ ಪ್ರಾಧಿಕಾರ ( ಮೆಷರ್ಸ್ ರಿಲೇಟೆಡ್ ಟು ಎಲೆಕ್ಟ್ರಿಕಲ್ ಸೇಫ್ಟಿ) ರೆಗುಲೇಷನ್ 2010ರ ರೆಗುಲೇಷನ್ 29 ಅನ್ನು ಉಲ್ಲಂಘಿಸಿದಂತಾಗುತ್ತದೆ.

12/7/13

C2 LEC DEI(L)

ಆದ್ದರಿಂದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಯ ಉಪವಿಭಾಗಗಳು / ಶಾಖೆಗಳಲ್ಲಿ ವಿದ್ಯುತ್ ಸ್ಥಾವರಗಳ ಅನುಮೋದನೆ/ ವಿದ್ಯುತ್ ಸಂಪರ್ಕಕ್ಕಾಗಿ ಸಲ್ಲಿಸಲಾಗುವಂತಹ ಎಲ್ಲಾ ಅರ್ಜಿಗಳೊಂದಿಗೆ ಕಡ್ಡಾಯವಾಗಿ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ಪ್ರತಿ, ವಿದ್ಯುತ್ ಮೇಲ್ವಿಚಾರಕರ ರಹದಾರಿಯ ಪ್ರತಿ ಹಾಗೂ ರಹದಾರಿಯು ವಿದ್ಯುತ್ ಗುತ್ತಿಗೆದಾರರ ಪರವಾನಗಿಗೆ ಹಿಂಬರಹ ಮಾಡಿಸಿಕೊಂಡಿರುವ ಬಗ್ಗೆ ಮೂಲ ವಿದ್ಯುತ್ ಪರವಾನಗಿ ಹಾಗೂ ವಿದ್ಯುತ್ ಮೇಲ್ವಿಚಾಕರ ರಹದಾರಿಗಳೊಂದಿಗೆ ಪರಿಶೀಲಿಸಿ ದೃಢೀಕರಿಸಿಕೊಂಡು ಪ್ರತಿಯನ್ನು ಪಡೆಯಬೇಕೆಂದು ಈ ಮೂಲಕ ಕೋರಲಾಗಿದೆ. ಎಲ್ಲಾ ವಿದ್ಯುತ್ ಸರಬರಾಜು ಸಂಸ್ಥೆಯ ಅಧಿಕಾರಿಗಳು ವಿದ್ಯುತ್ ಸ್ಥಾವರದ ಪರೀಕ್ಷೆ ಮತ್ತು ವಿದ್ಯುತ್ ಸಂಪರ್ಕ ನೀಡಬೇಕಾಗುವಂತಹ ಸಂದರ್ಭದಲ್ಲಿ ಕರ್ನಾಟಕ ವಿದ್ಯುಚ್ಚಕ್ತಿ ನಿಯಂತ್ರಣ ಆಯೋಗದಿಂದ ಹೊರಡಿಸಿರುವ ದಿ ಕರ್ನಾಟಕ ಕಂಡೀಷನ್ ಆಫ್ ಸಪ್ಲೈ ಆಫ್ ಎಲೆಕ್ಟ್ರಿಸಿಟಿ ಆಫ್ ದಿ ಡಿಸ್ಟ್ರಿಬ್ಯೂಷನ್ ಲೈಸೆನ್ಸೀಸ್ ಇನ್ ದಿ ಸ್ಟೇಟ್ ಆಫ್ ಕರ್ನಾಟಕ ನಿಯಮಗಳು 2006ರ ನಿಯಮ 4.06 (ii) ರ ಅಡಿಯಲ್ಲಿರುವಂತೆ ಪಾಲಿಸಿ ಕ್ರಮ ಕೈಗೊಳ್ಳುವುದು.

ಮುಖ್ಯ ವಿದ್ಯುತ್ ಪರಿವೀಕ್ಷಕರು.

ಪ್ರತಿಯನ್ನು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಅವಗಾಹನಗೆಗಾಗಿ ಸಲ್ಲಿಸಲಾಗಿದೆ.
2) ಆಡಳಿತ ನಿರ್ದೇಶಕರು, ಕ.ವಿ.ಪ್ರ.ನಿ.ನಿ. ಬೆಂಗಳೂರು ರವರ ಅವಗಾಹನಗೆ ಸಲ್ಲಿಸಿದೆ.
3) ಆಡಳಿತ ನಿರ್ದೇಶಕರು, ಬೆಸ್ಕಾಂ ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
4) ಆಡಳಿತ ನಿರ್ದೇಶಕರು, ಹೆಸ್ಕಾಂ ಹುಬ್ಬಳ್ಳಿ ರವರ ಅವಗಾಹನೆಗೆ ಸಲ್ಲಿಸಿದೆ.
5) ಆಡಳಿತ ನಿರ್ದೇಶಕರು, ಜೆಸ್ಕಾಂ ಗುಲ್ಬರ್ಗ ರವರ ಅವಗಾಹನೆಗೆ ಸಲ್ಲಿಸಿದೆ.
6) ಆಡಳಿತ ನಿರ್ದೇಶಕರು, ಮೆಸ್ಕಾಂ ಮಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
7) ಆಡಳಿತ ನಿರ್ದೇಶಕರು, ಸೆಸ್ಕ್ ಮೈಸೂರು ರವರ ಅವಗಾಹನೆಗೆ ಸಲ್ಲಿಸಿದೆ.
8) ತಾಂತ್ರಿಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ. ಬೆಂಗಳೂರು ರವರ ಅವಗಾಹನೆಗೆ
9) ತಾಂತ್ರಿಕ ನಿರ್ದೇಶಕರು, ಬೆಸ್ಕಾಂ ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
10) ತಾಂತ್ರಿಕ ನಿರ್ದೇಶಕರು, ಹೆಸ್ಕಾಂ ಹುಬ್ಬಳ್ಳಿ ರವರ ಅವಗಾಹನೆಗೆ ಸಲ್ಲಿಸಿದೆ
11) ತಾಂತ್ರಿಕ ನಿರ್ದೇಶಕರು, ಜೆಸ್ಕಾಂ ಗುಲ್ಬರ್ಗ ರವರ ಅವಗಾಹನೆಗೆ ಸಲ್ಲಿಸಿದೆ
12) ತಾಂತ್ರಿಕ ನಿರ್ದೇಶಕರು, ಮೆಸ್ಕಾಂ ಮಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
13) ತಾಂತ್ರಿಕ ನಿರ್ದೇಶಕರು, ಸೆಸ್ಕ್ ಮೈಸೂರು ರವರ ಅವಗಾಹನೆಗೆ ಸಲ್ಲಿಸಿದೆ

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ರವಾನಿಸಲಾಗಿದೆ.

1) ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳು.
2) ಎಲ್ಲಾ ವಿದ್ಯುತ್ ಪರಿವೀಕ್ಷಕರುಗಳು.
3) ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು – ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಕಾರ್ಯ ಮತ್ತು ಪಾಲನೆ ಉಪವಿಭಾಗಗಳಿಗೆ ಪ್ರತಿಯನ್ನು ರವಾನಿಸುವುದು. ಹಾಗು ಮೇಲ್ಕಂಡ ವಿಷಯದ ಪಾಲನೆಯ ಬಗ್ಗೆ ಉಪ ವಿಬಾಗಗಳಿಗೆ ಬೇಟಿ ನೀಡಿ ಪರಿಶೀಲಿಸುವುದು.
4) ಅಧ್ಯಕ್ಷರು, ಕರ್ನಾಟಕ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ, ಬೆಂಗಳೂರು.
5) ಮು.ಕ / ಕ.ಕ.

C2 LEC DEI(L)

ದೂರವಾಣಿ: 22341691

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಸಂಖ್ಯೆ: ವಿಪಇ/ಎಲ್.ಇ.ಸಿ-16/ **15346** / 13-14

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಂ: 32/2-1, ನೇ ಮಹಡಿ,
ಕ್ರೆಸೆಂಟ್ ಟವರ್, ಕ್ರೆಸೆಂಟ್ ರೋಡ್,
ಬೆಂಗಳೂರು 560 001
ದಿನಾಂಕ: **20-07-2013.**

## "ಅಧಿಕೃತ ಜ್ಞಾಪನ ಪತ್ರ"

ವಿಷಯ: ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ರ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸುವ, ಪರೀಶೀಲಿಸಿ ಮತ್ತು ಕೇಂದ್ರ ಕಛೇರಿಗೆ ಕಳುಹಿಸಿವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 01.10.2012.
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 26.02.2013.
3. ಸರ್ಕಾರದ ಪತ್ರದ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 02.03.2013.
4. ಈ ಕಛೇರಿ ಸುತ್ತೋಲೆ ಮುಖ್ಯ ವಿದ್ಯುತ್ ಪರಿವೀಕ್ಷಕರ /ಉವಿಪ 1/ 42535/ 12-13 ದಿನಾಂಕ 11-03-2013.

****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ರ ನಿಯಮ 5(2) ರಡಿಯಲ್ಲಿರುವಂತೆ ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಬೆಂಗಳೂರು ನಗರ ಮತು ಗ್ರಾಮಾಂತರ ಜಿಲ್ಲೆಯ ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳು ಮೇಲಿನ ನಿಯಮದಲ್ಲಿರುವಂತೆ ಅವರುಗಳ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿದ್ಯುತ್ ಮೇಲ್ವಿಚಾರಕರ ರಹದಾರಿಗಳು, ತಂತಿ ಕೆಲಸಗಾರರ ರಹದಾರಿಗಳು, ವಿಶೇಷ ತಂತಿ ಕೆಲಸಗಾರರ ರಹದಾರಿಗಳ ಹೊಸದು ಮತ್ತು ನವೀಕರಣ ಅರ್ಜಿಗಳನ್ನು ಸ್ವೀಕರಿಸುವ / ಪರಿಶೀಲಿಸುವ ಕೆಲಸಗಳನ್ನು ಅವರುಗಳು ಹಾಲಿ ನಿರ್ವಹಿಸುವ ಕಛೇರಿ ಕೆಲಸಗಳೊಂದಿಗೆ ದಿನಾಂಕ **01-08-2013** ರಿಂದ ನಿರ್ವಹಿಸಲು ಈ ಮೂಲಕ ಸೂಚಿಸಲಾಗಿದೆ. ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದ ಉಲ್ಲೇಖ (1) ಮತ್ತು (2) ರಲ್ಲಿರುವ ಸರ್ಕಾರದ ಆದೇಶದ ಪ್ರತಿಗಳನ್ನು ಈ ಪತ್ರದೊಂದಿಗೆ ಸೂಕ್ತ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಲಾಗಿದೆ.

1) ಉಪ ವಿದ್ಯುತ್ ಪರಿವೀಕ್ಷಕರುಗಳು ಆಯಾ ತಿಂಗಳ ಪ್ರಾರಂಭದಿಂದ ಅಂತ್ಯದ ದಿನಾಂಕದವರೆಗೆ ಅರ್ಜಿಗಳನ್ನು ಸ್ವೀಕರಿಸುವುದು ಹಾಗು ಈ ರೀತಿ ಸ್ವಿಕರಿಸಿದ ಅರ್ಜಿಗಳಿಗೆ ಸೂಕ್ತ ಸ್ವೀಕೃತಿಯನ್ನು ಅರ್ಜಿದಾರರಿಗೆ ನೀಡುವುದು.
2) ಸ್ವಿಕರಿಸಿದ ಎಲ್ಲಾ ಹೊಸದು ಮತ್ತು ನವೀಕರಣ ಅರ್ಜಿಗಳನ್ನು ಪರಿಶೀಲಿಸಿ ಮುಂದಿನ ತಿಂಗಳ 7ನೇ (ಏಳನೇ) ತಾರೀಖಿನೊಳಗೆ ಸೂಕ್ತ ಟಿಪ್ಪಣಿಯೊಂದಿಗೆ ಕೇಂದ್ರ ಕಚೆರಿಗೆ ರವಾನಿಸುವುದು.
3) ಮೇಲಿನ ನಿಯಮಗಳ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳ ವಿವರಗಳನ್ನು ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ರಿಜಿಸ್ಟರ್ (Register) ತೆರೆದು ಅದರಲ್ಲಿ ಆಯಾ ವರ್ಗದ ಪರವಾನಗಿಯವರು ನಿರ್ವಹಿಸಬೇಕಾದ ಉಪಕರಣಗಳ ವಿವರಗಳೊಂದಿಗೆ ನಮೂದಿಸತಕ್ಕದ್ದು, ಈ ರೀತಿಯ ನಮೊದನೆಗಳನ್ನು ಉಪ ವಿದ್ಯುತ್ ಪರಿವೀಕ್ಷಕರವರು ಪ್ರತಿ ಅರ್ಜಿಯ ವಿವರಗಳೊಂದಿಗೆ ಸಹಿಯೊಂದಿಗೆ ದೃಢೀಕರಿಸುವುದು.

20/7

ಪುಟ-2.......

C: LEC DE(L)

4) ನಿಯಮ 35ರ ಅಡಿಯಲ್ಲಿರುವಂತೆ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿಕೆಲಸಗಾರರ ರಹದಾರಿಗಳ ಹಿಂಬರಹ ಮಾಡುವುದು ಮತ್ತು ಕೋರಿಕೆಯ ಮೇರೆಗೆ ಹಿಂಬರಹಗಳನ್ನು ರದ್ದುಪಡಿಸುವ ಕೆಲಸಗಳ್ಳು ಅರ್ಜಿ ಸಲ್ಲಿಸಿದ ಎರಡು ದಿನಗಳ ಒಳಗೆ ವಿಲೇವಾರಿ ಮಾಡುವುದು. ರಹದಾರಿಗಳ ಹಿಂಬರಹದ ಬಗ್ಗೆ ಪ್ರತ್ಯೇಕ ರಿಜಿಸ್ಟರ್ (Register) ನಲ್ಲಿ ನಮೂಧಿಸಿ ನಿರ್ವಹಿಸುವುದು.

5) ಎಲ್ಲಾ ರೀತಿಯ ಹಿಂಬರಹಗಳನ್ನು ಮತ್ತು ಕೋರಿಕೆಯ ಮೇರೆಗೆ ಹಿಂಬರಹಗಳನ್ನು ರದ್ದುಪಡಿಸುವ ವಿವರಗಳನ್ನು ಕಡ್ಡಾಯವಾಗಿ ರಹದಾರಿ ಪುಸ್ತಕದಲ್ಲಿ ಮತ್ತು ಸಂಬಂಧಿಸಿದ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಪುಸ್ತಕದಲ್ಲಿ ನಮೂಧಿಸಬೇಕು ಮತ್ತು ಉಪ ವಿದ್ಯುತ್ ಪರಿವೀಕ್ಷಕರ ಸಹಿ ಮಾಡುವ ಮೂಲಕ ದೃಡಿಕರಿಸಬೇಕು.

6) ವಿಳಾಸ ದೃಢೀಕರಣ, ಬ್ಯಾಂಕ್ ಶಕ್ತಿ ಪತ್ರದ ಅಂಡರ್ ಟೇಕಿಂಗ್ ಮತ್ತು ಇತರೆ ವಿಷಯಗಳಿಗೆ ನೀಡುವ ದೃಢೀಕರಣ (Affidavit) ದಾಖಲೆಗಳ ಪತ್ರಗಳು ಕರ್ನಾಟಕ ಸ್ಟಾಂಪ್ ಆಕ್ಟ್ 1957 ರ ಅಡಿಯಲ್ಲಿರುವಂತೆ ಕನಿಷ್ಠ ರೂ.20/-(ಇಪ್ಪತ್ತು ರೂಪಾಯಿಗಳು ಮಾತ್ರ) ಮುಖಬೆಲೆಯ ಛಾಪಾ ಕಾಗದದಲ್ಲಿ ಇರಬೇಕು ಅಂತಹ ದೃಢೀಕರಣ ದಾಖಲೆಗಳನ್ನು ನೋಟರಿಯವರಿಂದ ದೃಢೀಕೃತವಾಗಿರಬೇಕು.

7) ಎಲ್ಲಾ ಅರ್ಜಿಗಳ ಕಡತದೊಂದಿಗೆ ರೂ.30/- ಅಂಚೆ ಚೀಟಿ ಅಂಟಿಸಿದ ಸ್ವ ವಿಳಾಸ ಬರೆದಿರುವ ಲಕೋಟೆಯನ್ನು ಅಳವಡಿಸಿರಬೇಕು, ಸದರಿ ಲಕೋಟೆಯ ಮೇಲೆ ಅರ್ಜಿದಾರರ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಬರೆದಿರಬೇಕು.

8) ಎಲ್ಲಾ ರೀತಿಯ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ, ವಿದ್ಯುತ್ ಮೇಲ್ವಿಚಾರಕರ ರಹದಾರಿಯ, ತಂತಿ ಕೆಲಸಗಾರರ ರಹದಾರಿಯ ಮತ್ತು ವಿಶೇಷ ತಂತಿ ಕೆಲಸಗಾರರ ರಹದಾರಿಯ ಹೊಸ ಅಥವಾ ನವೀಕರಣ ಅರ್ಜಿಗಳನ್ನು ಸೂಕ್ತ ಅಳತೆಯ ಕಡತದೊಂದಿಗೆ (File) ಮಾತ್ರ ಸ್ವೀಕರಿಸುವುದು.

9) ಎಲ್ಲಾ ಕಡತಗಳು (Files) 34x25 cm ಅಳತೆಯ ಫೈಲಿಂಗ್ ಸಿಸ್ಟಮ್ (Filling system) ಗಳಿಗಾಗಿ ಬಳಸುವ ದಪ್ಪ ಇರುವ (Thickest File) ಫೈಲ್‌ಗಳಾಗಿರಬೇಕು.

10) ಎಲ್ಲಾ ರೀತಿಯ ಕಡತಗಳ (File) ಮೇಲೆ ಅರ್ಜಿದಾರರ ಹೆಸರು, ಸಂಸ್ಥೆಯ ಹೆಸರು, ವಿಳಾಸ ಮತ್ತು ದೂರವಾಣಿಯ ಸಂಖ್ಯೆಯನ್ನು (ಸ್ಥಿರ ಅಥವಾ ಮೊಬೈಲ್) ಕಡ್ಡಾಯವಾಗಿ ಬರೆದಿರಬೇಕು ಹಾಗೂ ಮೇಲಿನ ವಿವರಗಳಲ್ಲದೇ ಬೇರೆ ಇನ್ನಾವುದೆ ವಿವರಗಳನ್ನು ಮುಖ ಪುಟದಲ್ಲಿ ಬರೆಯಬಾರದು.

11) ನಿಯಮದಲ್ಲಿ ತಿಳಿಸಿರುವಂತೆ ಆಯಾ ವರ್ಗದ ಪರವಾನಗಿ ಅರ್ಜಿಗಳ ಉಪಕರಣಗಳನ್ನು ಮತ್ತು ದಾಖಲೆಗಳನ್ನು ಅತ್ಯಂತ ಜಾಗರೂಕತೆಯಿಂದ ಪರಿಶೀಲಿಸಿ ದೃಡೀಕರಿಸುವುದು ಮತ್ತು ಅವುಗಳ ಮೇಲೆ ಪರವಾನಗಿ ಸಂಸ್ಥೆಯ ಹೆಸರು ಕೆತ್ತಿಸಿರುವುದನ್ನು ಸಹ ದೃಡೀಕರಿಸಿ ಸಲ್ಲಿಸಬೇಕು.

12) ಅರ್ಜಿ ನಮೂನೆ 'ಎ' ಮತ್ತು 'ಡಿ' ರಲ್ಲಿರುವ ಅನೆಕ್ಷರ್ 4 ರಲ್ಲಿ ಉಪಕರಣಗಳ ಪರಶೀಲನೆಯ ಬಗ್ಗೆ ಈ ರೀತಿ ಷರಾ ಬರೆದು ಸಹಿ ಮಾಡಬೇಕು **"ವಿದ್ಯುತ್ ಉಪಕರಣಗಳನ್ನು ಪರಿಶೀಲಿಸಲಾಗಿ ಅವುಗಳ ಮೇಲೆ ಸಂಸ್ಥೆಯ ಹೆಸರು ಕೆತ್ತಲಾಗಿದ್ದು ಮತ್ತು ಅವುಗಳು ಸುಸ್ಥಿತಿಯಲ್ಲಿವೆ ಎಂದು ಈ ಮೂಲಕ ದೃಡಿಕರಿಸಲಾಗಿದೆ".**

21/7/13

ಮುಖ್ಯ ವಿದ್ಯುತ್ ಪರಿವೀಕ್ಷಕರು

ಪ್ರತಿಯನ್ನು ಮಾಹಿತಿಗಾಗಿ ಹಾಗು ಸೂಕ್ತ ಮಾರ್ಗದರ್ಶನಕ್ಕಾಗಿ ರವಾನಿಸಲಾಗಿದೆ.

1. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ, ಉತ್ತರ ಮತ್ತು ದಕ್ಷಿಣ ವಲಯ ಬೆಂಗಳೂರು.
2. ಎಲ್ಲಾ ವಿದ್ಯುತ್ ಪರಿವೀಕ್ಷಕರುಗಳು, ಬೆಂಗಳೂರು ಪೂರ್ವ, ಉತ್ತರ ಮತ್ತು ದಕ್ಷಿಣ ವಲಯ ಕಛೇರಿಗಳು, ಬೆಂಗಳೂರು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಹಾಗು ಮೇಲೆ ತಿಳಿಸಿದಂತೆ ಕಾರ್ಯ ನಿರ್ವಹಿಸಲು ಕಳುಹಿಸಲಾಗಿದೆ.

1. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳು, ಬೆಂಗಳೂರು ಪೂರ್ವ, ಉತ್ತರ ಮತ್ತು ದಕ್ಷಿಣ ವಲಯ ಕಛೇರಿಗಳು, ಬೆಂಗಳೂರು.

ದೂರವಾಣಿ: 22341691

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಸಂಖ್ಯೆ: ಮುವಿಪ/ಸಿಸ4/17082-107/13-14

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಂ: 32/2-1, ನೇ ಮಹಡಿ,
ಕ್ರೆಸೆಂಟ್ ಟವರ್, ಕ್ರೆಸೆಂಟ್ ರೋಡ್,
ಬೆಂಗಳೂರು 560 001
ದಿನಾಂಕ: 31-07-2013

## "ಅಧಿಕೃತ ಜ್ಞಾಪನಾ ಪತ್ರ"

ವಿಷಯ: ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿದ್ಯುತ್ ಮೇಲ್ವಿಚಾರಕರ/ತಂತಿ ಕೆಲಸಗಾರರ ರಹದಾರಿಯ ಹೊಸದು/ನವೀಕರಣ ಅರ್ಜಿಗಳ ಸ್ವೀಕೃತಿಯ ಬಗ್ಗೆ, ವಿಷಯ ನಿರ್ವಾಹಕರುಗಳಿಗೆ ಕೆಲಸಗಳ ತಾತ್ಕಾಲಿಕ ಮರುಹಂಚಿಕೆಯ ಕುರಿತು.

ಉಲ್ಲೇಖ: ಈ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ: ವಿಪಇ/ಎಲ್‌ಇಸಿ-16/15346/2013-14
ದಿನಾಂಕ: 20.07.2013

*****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ರ ಅಡಿಯಲ್ಲಿರುವಂತೆ ಮೇಲ್ಕಂಡ ಉಲ್ಲೇಖ ಪತ್ರದಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ, ಉತ್ತರ ಮತ್ತು ಪೂರ್ವ ವಲಯದ ಕಚೇರಿಯ ಉಪ ವಿದ್ಯುತ್ ಪರಿವೀಕ್ಷಕರುಗಳು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವಂತಹ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ರಹದಾರಿಗಳ ಹೊಸದು/ನವೀಕರಣ ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲಿಸಿ ಸೂಕ್ತ ಮಾಹಿತಿಯೊಂದಿಗೆ ಕೇಂದ್ರ ಕಚೇರಿಗೆ ರವಾನಿಸಲು ಈಗಾಗಲೇ ಸೂಚಿಸಲಾಗಿರುತ್ತದೆ. ಸದರಿ ಕೆಲಸಗಳನ್ನು ನಿರ್ವಹಿಸಲು ಸಂಬಂಧಿಸಿದ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳು ಅವರುಗಳ ಅಧೀನದಲ್ಲಿ ಬರುವ ಈ ಕೆಳಕಂಡ ಅಧಿಕಾರಿಗಳಿಗೆ / ನೌಕರರುಗಳಿಗೆ ಮುಂದಿನ ಆದೇಶದವರೆಗೆ ಕೆಲಸಗಳನ್ನು ನಿರ್ದೇಶಿಸಿ ಕ್ರಮ ಕೈಗೊಳ್ಳಲು ಸೂಚಿಸಿದೆ.

ಈ ಕೆಳಗೆ ಸೂಚಿಸಿರುವ ಹುದ್ದೆಗಳಿಗೆ ಅನುಗುಣವಾಗಿ ಪ್ರಸ್ತುತ ನಿರ್ವಹಿಸುತ್ತಿರುವ ಕೆಲಸಗಳ ಜೊತೆಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ಕೆಲಸಗಳಾದ ವಿದ್ಯುತ್ ಗುತ್ತಿಗೆದಾರರ ಪರವಾನಗಿ/ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ರಹದಾರಿಗಳ ಹೊಸದು/ನವೀಕರಣ ಅರ್ಜಿಗಳ ಮತ್ತು ರಹದಾರಿಗಳಿಗೆ ಸಂಬಂಧಿಸಿದಂತೆ ಹಿಂಬರಹಗಳ ಅರ್ಜಿಗಳನ್ನು ನಿರ್ವಹಿಸಿ ಆಯಾ ಉಪ ವಿದ್ಯುತ್ ಪರಿವೀಕ್ಷಕರಿಗೆ ಸಲ್ಲಿಸುವುದು, ಈ ರೀತಿ ಸ್ವೀಕರಿಸಿದ ಅರ್ಜಿಗಳ ವಿವರಗಳನ್ನು ಪ್ರತ್ಯೇಕ ರಿಜಿಸ್ಟರ್ (Register) ಗಳಲ್ಲಿ ನಮೂದಿಸಿ ನಿರ್ವಹಿಸುವುದು. ಆಯಾ ತಿಂಗಳ ಅಂತ್ಯದ ವರೆಗೆ ಸ್ವೀಕರಿಸಿದ ಅರ್ಜಿಗಳನ್ನು ಕ್ರೋಡಿಕರಿಸಿ ಉಪ ವಿಭಾಗವಾರು ಕೇಂದ್ರ ಕಚೇರಿಗೆ ರವಾನಿಸುವ ನಿಟ್ಟಿನಲ್ಲಿ ಉಪ ವಿದ್ಯುತ್ ಪರಿವೀಕ್ಷಕರುಗಳು ಕೆಲಸ ನಿರ್ವಹಿಸುವಂತೆ, ಸೂಕ್ತ ಮಾರ್ಗದರ್ಶನ ನೀಡಲು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳಿಗೆ ಸೂಚಿಸಿದೆ.

ಈ ಮೇಲಿನ ಎಲ್ಲಾ ಕೆಲಸಗಳನ್ನು ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ರ ಅಡಿಯಲ್ಲಿ ತಿಳಿಸಿರುವಂತೆ ಕಟ್ಟುನಿಟ್ಟಾಗಿ ಪಾಲಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಸಹ ಸೂಚಿಸಿದೆ.

| ಕ್ರಮ ಸಂ. | ಹುದ್ದೆಯ ಹೆಸರು | ಕೆಲಸಗಳ ಮರು ಹಂಚಿಕೆ |
|---|---|---|
| 1. | ವ್ಯವಸ್ಥಾಪಕರು | ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳ ಮತ್ತು ವಿಶೇಷ ತಂತಿ ಕೆಲಸಗಾರರ ರಹದಾರಿಗಳ ಅರ್ಜಿಗಳಿಗೆ ಸಂಬಂಧಿಸಿದ ಕೆಲಸಗಳು. |
| 2. | ಅಧೀಕ್ಷಕರು | ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳ ನವೀಕರಣ ಅರ್ಜಿಗಳಿಗೆ ಸಂಬಂಧಿಸಿದ ಕೆಲಸಗಳು. |
| 3. | ಪ್ರಥಮ ದರ್ಜೆ ಸಹಾಯಕರು-1 | ವಿದ್ಯುತ್ ಮೇಲ್ವಿಚಾರಕರ ಹೊಸ/ನವೀಕರಣ ಹಾಗೂ ಹಿಂಬರಹದ ಅರ್ಜಿಗಳಿಗೆ ಸಂಬಂಧಿಸಿದ ಕೆಲಸಗಳು |
| 4. | ಪ್ರಥಮ ದರ್ಜೆ ಸಹಾಯಕರು-2 | ತಂತಿ ಕೆಲಸಗಾರರ ಹೊಸ ಮತ್ತು ನವೀಕರಣ ಹಾಗೂ ಹಿಂಬರಹದ ಅರ್ಜಿಗಳಿಗೆ ಸಂಬಂಧಿಸಿದ ಕೆಲಸಗಳು |

31/7/13

ಮುಖ್ಯ ವಿದ್ಯುತ್ ಪರಿವೀಕ್ಷಕರು

**ಪ್ರತಿಯನ್ನು ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1) ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ, ಉತ್ತರ ಮತ್ತು ಪೂರ್ವ ವಲಯ ಕಛೇರಿಗಳು, ಬೆಂಗಳೂರು- ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಕೆಲಸ ನಿರ್ವಹಿಸಲು ಸೂಚಿಸಿ, ಕೆಲಸಗಳು ಸುಗಮವಾಗಿ ನಡೆಯುವಂತೆ ಕ್ರಮಕೈಗೊಳ್ಳಲು ಸೂಚಿಸಿದೆ.
2) ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ಬೆಂಗಳೂರು ಪಶ್ಚಿಮ,
3) ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ, ಬೆಂಗಳೂರು ಹೆಚ್ಚುವರಿ ಪೂರ್ವ, ಬೆಂಗಳೂರು ಕೇಂದ್ರೀಯ,
4) ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ, ಬೆಂಗಳೂರು ಹೆಚ್ಚುವರಿ ದಕ್ಷಿಣ
5) ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ಬೆಂಗಳೂರು ಹೆಚ್ಚುವರಿ ಉತ್ತರ, ಬೆಂಗಳೂರು ಪಶ್ಚಿಮ,
6) ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ, ಬೆಂಗಳೂರು ಹೆಚ್ಚುವರಿ ಪೂರ್ವ, ಬೆಂಗಳೂರು ಕೇಂದ್ರೀಯ.
7) ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ-1, ಬೆಂಗಳೂರು ದಕ್ಷಿಣ -2, ಬೆಂಗಳೂರು ಹೆಚ್ಚುವರಿ ದಕ್ಷಿಣ-1, ಬೆಂಗಳೂರು ಹೆಚ್ಚುವರಿ ದಕ್ಷಿಣ-2.
8) ಉಪ ವಿದ್ಯುತ್ ಪರಿವೀಕ್ಷಕರು-1 ಕೇಂದ್ರ ಕಚೇರಿ

ದೂರವಾಣಿ : 22341691
ಫ್ಯಾಕ್ಸ್ : 22341692

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಸಂಖ್ಯೆ: ಮುವಿಪ/612 ಎಂಎಲ್‌ಎಸ್/ 11 - 60 /13-14

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
# 32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು 560 001.
ದಿನಾಂಕ: 14-8-13

# ಸುತ್ತೋಲೆ

ವಿಷಯ: ವರ್ಗ-1 ಪರವಾನಗಿ ಹೊಂದಿರುವ ವಿದ್ಯುತ್ ಗುತ್ತಿಗೆದಾರರುಗಳು ಹೊಸ ನಿಯಮಗಳಡಿಯಲ್ಲಿ ಹೆಚ್.ವಿ, ಇಹೆಚ್‌ವಿ ವಿದ್ಯುತ್ ಸ್ಥಾವರಗಳ ಕೆಲಸ ನಿರ್ವಹಿಸಲು ಸೂಪರ್ ಗ್ರೇಡ್ ವಿದ್ಯುತ್ ಪರವಾನಗಿಯನ್ನು ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂ. ಇಎನ್ 96 ಇಬಿಎಸ್ 2007 ದಿ: 1-10-2012.
2) ಸರ್ಕಾರದ ಅಧಿಸೂಚನೆ ಸಂ. ಇಎನ್ 96 ಇಬಿಎಸ್ 2007 ದಿ: 26-2-2013

-----

ಕರ್ನಾಟಕ (ಲೈಸೆನ್ಸಿಂಗ್ ಆಫ್ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ಸ್ ಅಂಡ್ ಪರ್ಮಿಟ್ಸ್ ಟು ಎಲೆಕ್ಟ್ರಿಕಲ್ ಸೂಪರ್‌ವೈಸರ್ ಅಂಡ್ ವೈರ್‌ಮನ್) 1976 ನಿರಸನಗೊಂಡು, ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ನಿಯಮಗಳು ಉಲ್ಲೇಖಿತ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡು ದಿನಾಂಕ 01-04-2013 ರಿಂದ ಜಾರಿಗೆ ಬಂದಿರುತ್ತದೆ.

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ಅಡಿಯಲ್ಲಿ, ನಿಯಮ 11 ರಲ್ಲಿ ವಿದ್ಯುತ್ ಪರವಾನಗಿಗಳನ್ನು ಸೂಪರ್‌ಗ್ರೇಡ್, ವರ್ಗ-1, ವರ್ಗ-2 ಮತ್ತು ವರ್ಗ-3 ಎಂಬುದಾಗಿ ವರ್ಗೀಕರಿಸಲಾಗಿರುತ್ತದೆ. ಹೊಸ ನಿಮಯಗಳಡಿಯಲ್ಲಿ 33 ಕೆವಿ ಸಿಸ್ಟಂ ವೋಲ್ಟೇಜ್‌ಗಿಂತ ಮೇಲ್ಪಟ್ಟ ವಿದ್ಯುತ್ ಸ್ಥಾವರಗಳ ಕಾಮಗಾರಿಗಳನ್ನು ನಿರ್ವಹಿಸಲು ಸೂಪರ್ ಗ್ರೇಡ್ ಪರವಾನಗಿಯನ್ನು ಹೊಂದುವುದು ಕಡ್ಡಾಯವಾಗಿರುತ್ತದೆ ಹಾಗೂ ನಿಯಮ 39 (2) (ಎ) ಈ ಕೆಳಕಂಡಂತಿರುತ್ತದೆ.

39(2)(a) all Licences or Special wiring permit or permits granted under the repealed rules shall be deemed to be valid till the date of Expiry, the renewal of which is subject to fulfilling of the conditions of licenses under these rules.

Provided that, the class I licensed electrical contractors who are executing electrical installation works of the voltage grade under super grade class licenses who shall surrender the license upon obtaining super grade license within the period not exceeding ninety days failing which it shall be deemed to be violation within the meaning of these rules.

ಆದ್ದರಿಂದ, ದಿನಾಂಕ: 30-06-2013 ಮುಂಚಿತವಾಗಿ ನೀಡಲಾದ, 33 ಕೆವಿ ಮೇಲ್ಪಟ್ಟಂತಹ ವಿದ್ಯುತ್ ಸ್ಥಾವರಗಳ ಕಾಮಗಾರಿಯ ಕಾರ್ಯಾದೇಶಗಳನ್ನು ಮಾತ್ರ ನಿರಶನಗೊಂಡ ಕರ್ನಾಟಕ (ಲೈಸೆನ್ಸಿಂಗ್ ಆಫ್ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ಸ್ ಅಂಡ್ ಪರ್ಮಿಟ್ಸ್ ಟು ಎಲೆಕ್ಟ್ರಿಕಲ್ ಸೂಪರ್‌ವೈಸರ್ ಅಂಡ್ ವೈರ್‌ಮನ್) 1976 ರಡಿಯಲ್ಲಿರುವಂತೆ ಪರಿಗಣಿಸುವುದು., ಹಾಗೂ ದಿನಾಂಕ: 01-07-2013 ನಂತರದ 33 ಕೆವಿ ಮೇಲ್ಪಟ್ಟಂತಹ ವಿದ್ಯುತ್ ಸ್ಥಾವರಗಳ ಕಾಮಗಾರಿಯ ಕಾರ್ಯಾದೇಶಗಳನ್ನು ಹೊಸ ನಿಯಮಗಳಡಿಯಲ್ಲಿ ಪರಿಗಣಿಸುವುದು.

ಮುಖ್ಯ ವಿದ್ಯುತ್ ಪರಿವೀಕ್ಷಕರು.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು ಕೆಳಕಂಡವರ ಅವಗಾಹನೆಗೆ ಸಲ್ಲಿಸಲಾಗಿದೆ.

1. ಮ್ಯಾನೇಜಿಂಗ್ ಡೈರೆಕ್ಟರ್, ಕ.ವಿ.ಪ್ರ.ನಿ.ನಿ. ಬೆಂಗಳೂರು
2. ಮ್ಯಾನೇಜಿಂಗ್ ಡೈರೆಕ್ಟರ್, ಕ.ವಿ.ನಿ.ನಿ. ಬೆಂಗಳೂರು
3. ಮ್ಯಾನೇಜಿಂಗ್ ಡೈರೆಕ್ಟರ್, ಬೆಸ್ಕಾಂ, ಬೆಂಗಳೂರು
4. ಮ್ಯಾನೇಜಿಂಗ್ ಡೈರೆಕ್ಟರ್, ಹೆಸ್ಕಾಂ ಹುಬ್ಬಳ್ಳಿ.
5. ಮ್ಯಾನೇಜಿಂಗ್ ಡೈರೆಕ್ಟರ್, ಜೆಸ್ಕಾಂ, ಗುಲ್ಬರ್ಗ.
6. ಮ್ಯಾನೇಜಿಂಗ್ ಡೈರೆಕ್ಟರ್, ಮೆಸ್ಕಾಂ, ಮಂಗಳೂರು.
7. ಮ್ಯಾನೇಜಿಂಗ್ ಡೈರೆಕ್ಟರ್, ಸೆಸ್ಕ್, ಮೈಸೂರು.
8. ಮ್ಯಾನೇಜಿಂಗ್ ಡೈರೆಕ್ಟರ್, K.U.W.S & B, No.516, BTM Layout, 1st stage, 1st Phase, B.G Road, Bangalore-39.
9. ತಾಂತ್ರಿಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ., ಬೆಂಗಳೂರು
10. ತಾಂತ್ರಿಕ ನಿರ್ದೇಶಕರು, ಕ.ವಿ.ಪ್ರ.ನಿ., ಬೆಂಗಳೂರು
11. ತಾಂತ್ರಿಕ ನಿರ್ದೇಶಕರು, ಬೆಸ್ಕಾಂ, ಬೆಂಗಳೂರು
12. ತಾಂತ್ರಿಕ ನಿರ್ದೇಶಕರು, ಹೆಸ್ಕಾಂ ಹುಬ್ಬಳ್ಳಿ.
13. ತಾಂತ್ರಿಕ ನಿರ್ದೇಶಕರು, ಜೆಸ್ಕಾಂ, ಗುಲ್ಬರ್ಗ.
14. ತಾಂತ್ರಿಕ ನಿರ್ದೇಶಕರು, ಮೆಸ್ಕಾಂ, ಮಂಗಳೂರು.
15. ತಾಂತ್ರಿಕ ನಿರ್ದೇಶಕರು, ಸೆಸ್ಕ್, ಮೈಸೂರು.
16. **ತಾಂತ್ರಿಕ ಸಹಾಯಕರು, ಜಲಸಂಪನ್ಮೂಲ ಇಲಾಖೆ,** Cauvery Neeravari Nigam Limited. Surface Water Data Center Building 3rd and 4th floor, Ananda Rao Circle, Bangalore-560009.
17. ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೆ. ಆರ್ ವೃತ್ತ, ಬೆಂಗಳೂರು
18. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಬೆಂಗಳೂರು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ರವಾನಿಸಲಾಗಿದೆ.

1. ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,
2. ಎಲ್ಲಾ ವಿದ್ಯುತ್ ಪರಿವೀಕ್ಷಕರು
3. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು,
4. ಸಹಾಯಕ ವಿದ್ಯುತ್ ಪರಿವೀಕ್ಷಕರು (ಸ್ವತಂತ್ರ), ಘಟಪ್ರಭಾ
5. ಅಧ್ಯಕ್ಷರು, ಕರ್ನಾಟಕ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ, ಬೆಂಗಳೂರು.
6. ಮು.ಕ / ಕ.ಕ.

ದೂರವಾಣಿ: 22341691

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಸಂಖ್ಯೆ: ವಿಪಇ/ಎಲ್.ಇ.ಸಿ-16/ **61 - 86** / 13-14

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಂ: 32/2-1, ನೇ ಮಹಡಿ,
ಕ್ರೆಸೆಂಟ್ ಟವರ್, ಕ್ರೆಸೆಂಟ್ ರೋಡ್,
ಬೆಂಗಳೂರು 560 001
ದಿನಾಂಕ: **24-08-2013.**

## ಸುತ್ತೋಲೆ

ವಿಷಯ: ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ರ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸುವ, ಪರೀಶಿಲಿಸಿ ಮತ್ತು ಕೇಂದ್ರ ಕಛೇರಿಗೆ ಕಳುಹಿಸಿವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 01.10.2012.
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 26.02.2013.
3. ಸರ್ಕಾರದ ಪತ್ರದ ಸಂಖ್ಯೆ: ಇಎನ್ 96 ಇಬಿಎಸ್ 2007 ದಿನಾಂಕ: 02.03.2013.
4. ಈ ಕಛೇರಿ ಸುತ್ತೋಲೆ ಮುವಿಪ /ಉವಿಪ 1/ 42535/ 12-13 ದಿನಾಂಕ 11-03-2013.
5. ಈ ಕಛೇರಿ ಅ.ಜ್ಞಾ.ಪತ್ರ ಸಂ: ಮುವಿಪ/ಉವಿಪ 1/ 15346/ 12-13 ದಿನಾಂಕ 20-07-2013.
6. ಈ ಕಛೇರಿ ಅ.ಜ್ಞಾ.ಪತ್ರ ಸಂ: ಮುವಿಪ/ಉವಿಪ 1/ 17082-107/ 12-13 ದಿನಾಂಕ 31-07-2013.

****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತಿ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012 ರ ಅಡಿಯಲ್ಲಿರುವಂತೆ ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಬೆಂಗಳೂರು ನಗರ ಮತು ಗ್ರಾಮಾಂತರ ಜಿಲ್ಲೆಯ ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳು ಮೇಲಿನ ನಿಯಮದಲ್ಲಿರುವಂತೆ ಅವರುಗಳ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿದ್ಯುತ್ ಮೇಲ್ವಿಚಾರಕರ ರಹದಾರಿಗಳು, ತಂತಿ ಕೆಲಸಗಾರರ ರಹದಾರಿಗಳು, ವಿಶೇಷ ತಂತಿ ಕೆಲಸಗಾರರ ರಹದಾರಿಗಳ ಹೊಸದು ಮತ್ತು ನವೀಕರಣ ಅರ್ಜಿಗಳನ್ನು ಸ್ವೀಕರಿಸುವ / ಪರಿಶೀಲಿಸುವ ಕೆಲಸಗಳನ್ನು ಅವರುಗಳು ಹಾಲಿ ನಿರ್ವಹಿಸುವ ಕಛೇರಿ ಕೆಲಸಗಳೊಂದಿಗೆ ದಿನಾಂಕ 01-08-2013 ರಿಂದ ನಿರ್ವಹಿಸಲು ಈ ಕಚೇರಿ ಉಲ್ಲೇಖ (5)ರಲ್ಲಿರುವಂತೆ ಸೂಚಿಸಲಾಗಿರುತ್ತದೆ.

ಸದರಿ ನಿಯಮಗಳಡಿಯಲ್ಲಿನ ನಿಯಮ 9ರಲ್ಲಿರುವಂತೆ ಎಲ್ಲಾ ರೀತಿಯ ಅರ್ಜಿಗಳ ಶುಲ್ಕ, ಪರವಾನಗಿಗಳ, ರಹದಾರಿಗಳ ಹೊಸದು ಮತ್ತು ನವೀಕರಣಗಳ ಶುಲ್ಕ, ರಹದಾರಿಗಳ ಹಿಂಬರಹಗೊಳಿಸುವ ಶುಲ್ಕಗಳನ್ನು ಪಾವತಿಸುವ ಬಗ್ಗೆ ಈ ಕೆಳಕಂಡಂತೆ ತಿಳಿಸಲಾಗಿದೆ.

**" RULE 9. Fees.- Every application for grant of licenses or permit as the case may be accompanied by an original treasury challan for having remitted the requisite fees as specified in Annexure - 5. The fees shall be remitted at the designated office of the Electrical Inspectorate or at the concerned District treasury under the Budget Head "Non plan – 0043" Taxes and Duties on Electricity, not earlier than Ninety days prior to the date of submission of application. The fee remitted is not transferable and nonrefundable"**

ಕರ್ನಾಟಕ ಆರ್ಥಿಕ ಸಂಹಿತೆ 1958ರ ನಿಯಮ 4 (ಬಿ) (1)ರ ಅಡಿಯಲ್ಲಿರುವಂತೆ ಹಾಗೂ ಈ ಕಚೇರಿ ಸುತ್ತೋಲೆ ಸಂಖ್ಯೆ: ಮುವಿಪ/ಸಿಸ2/ರಾ.ಕ.ಸ್ವಿ/ 24223-63/ ದಿನಾಂಕ: 29.10.2009ರಲ್ಲಿ ಈಗಾಗಲೆ ಸೂಚಿಸಿರುವಂತೆ ರೂ. 250/- (ಎರಡು ನೂರ ಐವತ್ತು ರೂಪಾಯಿಗಳು ಮಾತ್ರ)ರ ವರೆಗಿನ ಮೊತ್ತವನ್ನು ನಗದಾಗಿ ಪಡೆಯಬಹುದಾಗಿರುತ್ತದೆ. ಆದ್ದರಿಂದ ಆಯಾ ಕಚೇರಿಯ ನಗದು ಶಾಖೆಯಲ್ಲಿ ರೂ. 250/-ರವರೆಗಿನ ಮೊತ್ತವನ್ನು ನಗದಾಗಿ ಸ್ವೀಕರಿಸಿ ನಿಗಧಿತ ರಸೀದಿಯನ್ನು ನೀಡುವುದು ಹಾಗೂ ರೂ. 250/-ಕ್ಕಿಂತ ಹೆಚ್ಚಿನ ಮೊತ್ತದ ಶುಲ್ಕಗಳನ್ನು ಬ್ಯಾಂಕ್‌ಗಳಿಂದ ಪಡೆದ ಡಿ.ಡಿ.(Demand Draft)ಗಳ ಅಥವಾ ಖಜಾನೆ ಚಲನ್‌ಗಳ ಮುಖಾಂತರ ಪಡೆಯಲು ಸೂಕ್ತ ಕ್ರಮ ಕೈಗೊಳ್ಳುವುದು.

24/8/12

ಮುಖ್ಯ ವಿದ್ಯುತ್ ಪರಿವೀಕ್ಷಕರು

ಪ್ರತಿಯನ್ನು ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

1. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ, ಉತ್ತರ ಮತ್ತು ದಕ್ಷಿಣ ವಲಯ ಬೆಂಗಳೂರು.
2. ಎಲ್ಲಾ ವಿದ್ಯುತ್ ಪರಿವೀಕ್ಷಕರುಗಳು, ಬೆಂಗಳೂರು ಪೂರ್ವ, ಉತ್ತರ ಮತ್ತು ದಕ್ಷಿಣ ವಲಯ ಕಛೇರಿಗಳು, ಬೆಂಗಳೂರು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳು, ಬೆಂಗಳೂರು ಪೂರ್ವ, ಉತ್ತರ ಮತ್ತು ದಕ್ಷಿಣ ವಲಯ ಕಛೇರಿಗಳು, ಬೆಂಗಳೂರು.

C2//LEC/DEI(L)

ದೂರವಾಣಿ: 22341691

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಸಂ: ವಿಪಇ/ಎಲ್.ಇ.ಸಿ- 12 /13-14 1774-2013

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
ನಂ.32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು 560 001.
ದಿನಾಂಕ : 18/09/13

# ಸುತ್ತೋಲೆ

ವಿಷಯ: ಸೂಪರ್ ಗ್ರೇಡ್ ಮತ್ತು ವರ್ಗ-1 ರ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಅರ್ಜಿಸಲ್ಲಿಸುವಂತಹ ವ್ಯಕ್ತಿಗಳ/ಸಂಸ್ಥೆಗಳ/ ಫರ್ಮ್‌ಗಳ ವ್ಯವಹಾರಿಕ ವಿಳಾಸವು ವಾಣಿಜ್ಯ ಕಟ್ಟಡದಲ್ಲಿರುವ ಕುರಿತು.

*****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 12(1)(e) ರ ಅಡಿಯಲ್ಲಿರುವಂತೆ ಸೂಪರ್ ಗ್ರೇಡ್ ಮತ್ತು ವರ್ಗ-1ರ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಅರ್ಜಿ ಸಲ್ಲಿಸುವಂತಹ ಸಂಸ್ಥೆಗಳು / ಫರ್ಮ್‌ಗಳ ವ್ಯವಹಾರಿಕ ವಿಳಾಸವು ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

"The exclusive business premises to carry out business incidental to grant of licence shall be easily accessible and located within the territory of the State of Karnataka, and it shall not be residential premises for Super Grade and Class I Licenses, and also shall not be a Government quarters".

ಈ ಬಗ್ಗೆ ದಿನಾಂಕ: 26.6.2013, 28-07-2013 ಮತ್ತು 28-08-2013 ರಂದು ನಡೆದ 2, 3, ಮತ್ತು 4ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಿ, ಸಭೆಯಲ್ಲಿ ಚರ್ಚಿಸಿ, ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 12(2)(a)&(b) ರ ಅಡಿಯಲ್ಲಿರುವಂತೆ ಸೂಪರ್ ಗ್ರೇಡ್ ಮತ್ತು ವರ್ಗ-1ರ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಅರ್ಜಿ ಸಲ್ಲಿಸುವಂತಹ ವ್ಯಕ್ತಿಗಳ/ಸಂಸ್ಥೆಗಳ/ಫರ್ಮ್‌ಗಳ ವ್ಯವಹಾರಿಕ ವಿಳಾಸವು ಮೇಲಿನ ನಿಯಮ 12(1)(e) ರಲ್ಲಿರುವಂತೆ ಕಡ್ಡಾಯವಾಗಿ ವಾಣಿಜ್ಯ ಕಟ್ಟಡಗಳಲ್ಲಿರಬೇಕು. ಒಂದೊಮ್ಮೆ ವಿದ್ಯುತ್ ಗುತ್ತಿಗೆದಾರರು ತಮ್ಮ ಸ್ವಂತ ಮನೆಯ ಒಂದು ಭಾಗ ಅಥವ ಒಂದು ಮಹಡಿಯಲ್ಲಾಗಲಿ ಕಛೇರಿಯನ್ನು ಮಾಡಿಕೊಂಡಿದ್ದಲ್ಲಿ ಈ ಬಗ್ಗೆ ನಿಯಮ 12(3)(ಎಫ್)ರಲ್ಲಿ ಸೂಚಿಸಿರುವ ದಾಖಲೆಗಳೊಂದಿಗೆ ಹೆಚ್ಚುವರಿಯಾಗಿ ಸದರಿ ಕಚೇರಿಗೆ ಪ್ರತ್ಯೇಕವಾಗಿ ಸಂಪರ್ಕ ಪಡೆದಿರುವ ಬಗ್ಗೆ ವಿದ್ಯುತ್ ಬಿಲ್ಲಿನ (ಎಲ್‌ಟಿ-3) ಆದಾರದ ಮೇಲೆ ವಾಣಿಜ್ಯ ಕಟ್ಟಡವೆಂದು ದೃಢಿಕರಣ ಸಲ್ಲಿಸಬಹುದಾಗಿರುತ್ತದೆ ಎಂದು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ ಸೂಪರ್ ಗ್ರೇಡ್ ಮತ್ತು ವರ್ಗ-1ರ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಅರ್ಜಿ ಸಲ್ಲಿಸುವಂತಹ ವ್ಯಕ್ತಿಗಳ/ಸಂಸ್ಥೆಗಳ/ ಫರ್ಮ್‌ಗಳ ವ್ಯವಹಾರಿಕ ವಿಳಾಸದ ಬಗ್ಗೆ ನಿಯಮ 12(3)(ಎಫ್) ರಲ್ಲಿನಿಗಧಿಪಡಿಸಿರುವ ದಾಖಲೆಗಳೊಂದಿಗೆ ತಮ್ಮ ಸ್ವಂತ ಮನೆಯ ಒಂದು ಭಾಗ ಅಥವ ಒಂದು ಮಹಡಿಯಲ್ಲಾಗಲಿ ಕಛೇರಿಯನ್ನು ಮಾಡಿಕೊಂಡಂತಹ ವಿದ್ಯುತ್ ಗುತ್ತಿಗೆದಾರರು ತಮ್ಮ ಕಚೇರಿಗೆ ಸಂಪರ್ಕ ನೀಡಿರುವ ವಿದ್ಯುತ್ ಬಿಲ್ಲಿನ (ಎಲ್‌ಟಿ-3) ಪ್ರತಿಯನ್ನು ಸಲ್ಲಿಸಿದ್ದಲ್ಲಿ ಅಂತಹ ದಾಖಲೆಗಳನ್ನು ಸಹ ವಿಳಾಸ ಧೃಡಿಕರಣ ದಾಖಲೆಯೆಂದು ಪರಿಗಣಿಸಿ ಸೂಕ್ತ ಕ್ರಮತೆಗೆದುಕೊಳ್ಳುವುದು.

(Sd/-) 18/9/13
ಮುಖ್ಯ ವಿದ್ಯುತ್ ಪರಿವೀಕ್ಷಕರು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

1) ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳಿಗೆ ಮೇಲಿನ ಮಾಹಿತಿಯನ್ನು ಪಡೆದು ಅರ್ಜಿ ಜೊತೆ ಲಗತ್ತಿಸಿ ಕಳುಹಿಸಿಕೊಡುವ ಸಲುವಾಗಿ ಪ್ರತಿಯನ್ನು ಮಾಹಿತಿಗಾಗಿ ಕೆಳಕಂಡವರಿಗೆ ರವಾನಿಸಲಾಗಿದೆ.

1) ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳು.
2) ಎಲ್ಲಾ ವಿದ್ಯುತ್ ಪರಿವೀಕ್ಷಕರುಗಳು.
3) ಅಧ್ಯಕ್ಷರು, ಕರ್ನಾಟಕ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ, ಬೆಂಗಳೂರು.
4) ಮು.ಕ / ಕ.ಕ.

C:\LEC DEIL)

ದೂರವಾಣಿ: 22341691

ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಸಂ: ವಿಪಇ/ಎಲ್.ಇ.ಸಿ - 11/13-14 [illegible]

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
ನಂ.32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು 560 001.
ದಿನಾಂಕ : 13/09/13

# ಸುತ್ತೋಲೆ

ವಿಷಯ: ವಿದ್ಯುತ್ ಗುತ್ತಿಗೆದಾರರ ಪರವಾನಗಿಯನ್ನು ನವೀಕರಿಸದೆ ಗತಿಸಿರುವ ಪರವಾನಗಿಯ ಆಧಾರದ ಮೇಲೆ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಅರ್ಜಿ ಸಲ್ಲಿಸುವ ಬಗ್ಗೆ.

*****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 1976ರ (ನಿರಸನಗೊಂಡಿರುವ) ನಿಯಮಗಳ ಅಡಿಯಲ್ಲಿರುವಂತೆ ಅಧಿಕೃತ ವಿದ್ಯುತ್ ಗುತ್ತಿಗೆದಾರರ ಪರವಾನಗಿಯನ್ನು ಹೊಂದಿರುವಂತಹ ವಿದ್ಯುತ್ ಗುತ್ತಿಗೆದಾರರು ಅವರುಗಳ ಪರವಾನಗಿಯನ್ನು ನವೀಕರಿಸದೆ ಮಾನ್ಯತಾ ಅವಧಿ ಗತಿಸಿರುವಂತಹ ಪರವಾನಗಿಯನ್ನು ಹೊಂದಿರುವಂತಹ ವಿದ್ಯುತ್ ಗುತ್ತಿಗೆದಾರರು ಪುನ: ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಿದ್ಯುತ್ ಮೇಲ್ವಿಚಾರಕರ ಹುತ್ತು ತಂತೀ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 12(2) ರಲ್ಲಿರುವಂತೆ ಅರ್ಜಿಯನ್ನು ಸಲ್ಲಿಸುವ ಕುರಿತು ದಿನಾಂಕ: 26.6.2013, 28-07-2013 ಮತ್ತು 28-08-2013 ರಂದು ನಡೆದ 2, 3, ಮತ್ತು 4ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳ ಸಭೆಗೆ ವಿಷಯವನ್ನು ಮಂಡಿಸಿ, ಸಭೆಯಲ್ಲಿ ಚರ್ಚಿಸಿ ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 12(3)(ಹೆಚ್) ಅಡಿಯಲ್ಲಿರುವಂತೆ ಮಾನ್ಯತಾ ಅವಧಿ ಗತಿಸಿರುವಂತಹ ಪರವಾನಗಿಯನ್ನು ಹೊಂದಿದ್ದಂತಹ ವಿದ್ಯುತ್ ಗುತ್ತಿಗೆದಾರರು ತಮ್ಮ ಗತಿಸಿದ ಪರವಾನಗಿಯ ಆದಾರದ ಮೇಲೆ ನಿಯಮ 12 ರಲ್ಲಿ ಸೂಚಿಸಿರುವ ಎಲ್ಲಾ ನಿಬಂಧನೆಗಳನ್ನೊಳಗೊಂಡು ಮತ್ತು ನಿಯಮ12(2) (ಪರವಾನಗಿಯ ವರ್ಗಗಳಿಗೆ ಅನುಗುಣವಾಗಿ) ನಿಗಧಿಪಡಿಸಿರುವ ದಾಖಲೆಗಳೊಂದಿಗೆ ಅವರುಗಳು ಸಹ ನಿಯಮ 12(3)(ಹೆಚ್) ದಾಖಲೆಗಳೊಂದಿಗೆ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಅರ್ಜಿಯನ್ನು ಸಲ್ಲಿಸಬಹುದು ಎಂದು ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 12(3)(ಹೆಚ್)ರಲ್ಲಿರುವಂತೆ ಗತಿಸಿದ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ಆಧಾರದ ಮೇಲೆ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಅರ್ಜಿ ಸಲ್ಲಿಸುವಂತಹ ಅರ್ಜಿದಾರರು ನಿಯಮ 12 ರಲ್ಲಿ ಸೂಚಿಸಿರುವ ಎಲ್ಲಾ ನಿಬಂದನೆಗಳನ್ನೊಳಗೊಂಡು ಮತ್ತು ನಿಯಮ12(2)(ಪರವಾನಗಿಯ ವರ್ಗಗಳಿಗೆ ಅನುಗುಣವಾಗಿ) ನಿಗಧಿಪಡಿಸಿರುವ ದಾಖಲೆಗಳೊಂದಿಗೆ ಹಾಗು ಹೆಚ್ಚುವರಿಯಾಗಿ ನಿಯಮ 12(3)(ಹೆಚ್) ದಾಖಲೆಗಳೊಂದಿಗೆ ಹೊಸ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಾಗಿ ಅರ್ಜಿಯನ್ನು ಸಲ್ಲಿಸಿದಲ್ಲಿ ಅಂತಹ ಅರ್ಜಿಯನ್ನು ಸ್ವೀಕರಿಸಿ, ಪರಿಶೀಲಿಸಿ ಸೂಕ್ತ ಮಾಹಿತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಕೇಂದ್ರ ಕಚೇರಿಗೆ ಕಳುಹಿಸಲು ಕ್ರಮ ತೆಗೆದುಕೊಳ್ಳುವುದು.

ಮುಖ್ಯ ವಿದ್ಯುತ್ ಪರಿವೀಕ್ಷಕರು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

2) ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು.

ಪ್ರತಿಯನ್ನು ಮಾಹಿತಿಗಾಗಿ ಕೆಳಕಂಡವರಿಗೆ ರವಾನಿಸಲಾಗಿದೆ.

5) ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳು.

6) ಎಲ್ಲಾ ವಿದ್ಯುತ್ ಪರಿವೀಕ್ಷಕರುಗಳು.

7) ಅಧ್ಯಕ್ಷರು, ಕರ್ನಾಟಕ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ, ಬೆಂಗಳೂರು.

8) ಮು.ಕ / ಕ.ಕ.

ಕರ್ನಾಟಕ ಸರ್ಕಾರ

**(ವಿದ್ಯುತ್ ಪರಿವೀಕ್ಷಣಾಲಯ)**

ಸಂ: ವಿಪಇ/ಎಲ್‌ಇಸಿ / 48433-73 /13-14
ಲಗತ್ತು: ಒಂದು ಪತ್ರ ನಾಲ್ಕು ಪುಟಗಳು

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
ನಂ.32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ದಿನಾಂಕ : 3/3/14

ಗೆ:
ಅಧೀಕ್ಷಕ ಇಂಜಿನೀಯರ್ (ವಿದ್ಯುತ್)
ಟ್ರಾನ್ಸಮಿಷನ್ ( ಡಬ್ಲು & ಡಬ್ಲು ) ವೃತ್ತ,
ಕ ವಿ ಪ್ರ ನಿ ನಿ,
ಸಿದ್ಧಗಂಗ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ,
ತುಮಕೂರು - 02.

ಮಾನ್ಯರೆ,

ವಿಷಯ: 66 ಕೆ.ವಿ ಮತ್ತು ಹೆಚ್ಚಿನ ವಿದ್ಯುತ್ ಕೇಂದ್ರಗಳ ಉಪಕರಣಗಳು ಮತ್ತು ಕಂಭಗಳಿಗೆ ಬಣ್ಣ ಬಳಿಯುವ ಕೆಲಸಗಳ ಬಗ್ಗೆ.

ಉಲ್ಲೇಖ: ತಮ್ಮ ಕಛೇರಿ ಪತ್ರದ ಸಂ. ಕವಿಪ್ರನಿನಿ/ಎಸ್ ಇ ಇ /ಟಿಆರ್ ( ಡಬ್ಲು & ಡಬ್ಲು )/5540-41 ದಿನಾಂಕ: 22.01.2014.

****

ಮೇಲ್ಕಂಡ ವಿಷಯಕ್ಕೆ ಸಂಭಂದಿಸಿದಂತೆ, 66 ಕೆ.ವಿ ಮತ್ತು ಹೆಚ್ಚಿನ ವಿದ್ಯುತ್ ಕೇಂದ್ರಗಳ ಉಪಕರಣಗಳು ಮತ್ತು ಕಂಬಗಳಿಗೆ ಬಣ್ಣ ಬಳಿಯುವ ಕೆಲಸಗಳನ್ನು ನಿರ್ವಹಿಸಲು ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ಅಗತ್ಯವಿದೆಯೆ ಎನ್ನುವ ಬಗ್ಗೆ ದಿನಾಂಕ 24.02.2014ರಂದು ನಡೆದ 10ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಸಭೆಯಲ್ಲಿ ಮಂಡಿಸಿ ವಿವರವಾಗಿ ಚರ್ಚಿಸಿ, ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿದ್ಯುತ್ ಮೇಲ್ವಿಚಾರಕರ, ತಂತಿ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012ರ ನಿಯಮ 11 (3) ರಲ್ಲಿರುವಂತೆ, 66 ಕೆ.ವಿ ಮತ್ತು ಹೆಚ್ಚಿನ ವಿದ್ಯುತ್ ಕೇಂದ್ರಗಳ ವಿದ್ಯುತ್ ಕಾಮಗಾರಿಗಳಿಗೆ ಮಾತ್ರ ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಅಗತ್ಯವಿರುತ್ತದೆ ಎಂದು ಮತ್ತು ವಿದ್ಯುತ್ ಕಾಮಗಾರಿಗಳಲ್ಲದ ವಿದ್ಯುತ್ ಸ್ಥಾವರ ಕೇಂದ್ರಗಳ ಉಪಕರಣಗಳು ಮತ್ತು ಟ್ರಾನ್ಸ್‌ಮಿಷನ್ ಕಂಬಗಳಿಗೆ ಬಣ್ಣ ಬಳಿಯುವ ಕೆಲಸಗಳಿಗೆ ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಅಗತ್ಯವಿರುವುದಿಲ್ಲವೆಂದು, ಸದರಿ ಕೆಲಸಗಳ ಬಗ್ಗೆ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ ಸಂಸ್ಥೆಯವರು, ನಿಯಮಾನುಸಾರ ವಿದ್ಯುತ್ ಸ್ಥಾವರ ಮತ್ತು ಪ್ರಸರಣಾ ಮಾರ್ಗಗಳ ವಿದ್ಯುತ್ ನಿಲುಗಡೆಗೊಡಿಸಿ ಸುರಕ್ಷತೆಯನ್ನು ಖಚಿತಪಡಿಸಿಕೊಂಡು ಕಂಪನಿ ನಿಯಮಾನುಸಾರ ಕ್ರಮ ಕೈಗೊಳ್ಳಬಹುದೆಂದು ತಿಳಿಸಲು ತೀರ್ಮಾನಿಸಲಾಯಿತೆಂದು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.

ತಮ್ಮ ನಂಬುಗೆಯ

(ಸಹಿ) 3/3/14

ಮುಖ್ಯ ವಿದ್ಯುತ್ ಪರಿವೀಕ್ಷಕರು.

ಪ್ರತಿಯನ್ನು:
1. ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ. ಕಾವೇರಿ ಭವನ, ಬೆಂಗಳೂರು ರವರಿಗೆ ಸಲ್ಲಿಸಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ಸರಬರಾಜು ಕಂಪನಿಗಳು, ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಗುಲ್ಬರ್ಗಾ ರವರುಗಳಿಗೆ ಸಲ್ಲಿಸಲಾಗಿದೆ.
3. ಮುಖ್ಯ ಅಭಿಯಂತರರು (ವಿ), ಮೇಜರ್ ವರ್ಕ್ಸ್. ಕ.ವಿ.ಪ್ರ.ನಿ.ನಿ. ರವರುಗಳಿಗೆ ಮಾಹಿತಿಗಾಗಿ ರವಾನಿಸಲಾಗಿದೆ.
4. ಎಲ್ಲಾ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳಿಗೆ ರವಾನಿಸಲಾಗಿದೆ.
5. ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳಿಗೆ ರವಾನಿಸಲಾಗಿದೆ.
6. ಎಲ್ಲಾ ವಿದ್ಯುತ್ ಪರಿವೀಕ್ಷಕರುಗಳಿಗೆ ರವಾನಿಸಲಾಗಿದೆ.

C2//LEC/DEI(L)

ದೂರವಾಣಿ: 22341691

ಕರ್ನಾಟಕ ಸರ್ಕಾರ

**(ವಿದ್ಯುತ್ ಪರಿವೀಕ್ಷಣಾಲಯ)**

ಸಂ: ವಿಪಇ/ಎಲ್‌ಇಸಿ/ 211-59 /13-14

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
ನಂ.32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ದಿನಾಂಕ : 3/4/14

ಗೆ:

1. ಕಾರ್ಯದರ್ಶಿಗಳು,
ಕರ್ನಾಟಕರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ,
ನಂ. 33, ಅವಿನ್ಯೂ ರಸ್ತೆ,
ಬೆಂಗಳೂರು-2.
2. ಕಾರ್ಯದರ್ಶಿಗಳು,
ಶಿಫ್ಟ್ ಡ್ಯೂಟೀಸ್ ಎಲೆಕ್ಟ್ರಿಕಲ್ಸ್ ಕಂಟ್ರಾಕ್ಟರ್ಸ್ ಅಸೋಸಿಯೇಷನ್ ಬೆಳಗಾಂ,
ನಂ. ಜಿಎಸ್ -4, ಪ್ರಸಾದ್ ಪ್ಲಾಜಾ,
ಎಸ್.ಬಿ.ಐ ಬ್ಯಾಂಕ್ ಎದುರು, ಶಿವಬಸವನಗರ,
ಅಶೋಕ ನಗರ, ಬೆಳಗಾಂ -590 010.

ಮಾನ್ಯರೆ,

ವಿಷಯ: 66 ಕೆ.ವಿ ಮತ್ತು ಹೆಚ್ಚಿನ ವಿದ್ಯುತ್ ಕೇಂದ್ರಗಳ ಪಾಳ ಮತ್ತು ನಿರ್ವಹಣ ಕೆಲಸಗಳಿಗೆ ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ಅಗತ್ಯತೆಯ ಬಗ್ಗೆ.

ಉಲ್ಲೇಖ: 1. ಪ. ಸಂ: 354 ದಿ: 18.12.2013 ಕ.ಅ.ವಿ.ಗು.ಸಂ, ಬೆಂ ರವರ ಮನವಿ ಪತ್ರ.
2. ಪ. ಸಂ: ಎಸ್.ಡಿ ಇ ಸಿ ಎ / ಎಫ್-1/ 10/ 2013-14/ ದಿ: 30.1.2014.

****

ಮೇಲ್ಕಂಡ ವಿಷಯಕ್ಕೆ ಸಂಭಂದಿಸಿದಂತೆ, 66 ಕೆ.ವಿ ಮತ್ತು ಹೆಚ್ಚಿನ ವಿದ್ಯುತ್ ಕೇಂದ್ರಗಳ ಪಾಳ ಮತ್ತು ನಿರ್ವಹಣ ಕೆಲಸಗಳನ್ನು ನಿರ್ವಹಿಸಲು ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ಅಗತ್ಯವಿದೆಯೆ ಎನ್ನುವ ಬಗ್ಗೆ ದಿನಾಂಕ: 31.01.2014 ಮತ್ತು ದಿನಾಂಕ 24.02.2014ರಂದು ನಡೆದ 9 ಮತ್ತು 10ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಸಭೆಯಲ್ಲಿ ಪ್ರಸ್ತಾವಿತ ವಿಷಯವನ್ನು ಮಂಡಿಸಿ ವಿವರವಾಗಿ ಚರ್ಚಿಸಿ, ಭಾರತೀಯ ವಿದ್ಯುಚ್ಛಕ್ತಿ ನಿಯಮ 1956ರ ನಿಯಮ 45 ರಲ್ಲಿ ಈ ಕೆಳಕಂಡಂತೆ ಇರುವುದರಿಂದ

(1) No electrical Installation work, Including additions, Alterations, repairs and Adjustments to existing installations, except such replacement of lamps, fans, Fuses, Switches, low voltage domestic appliances and fittings as in no way alters its capacity or character, shall be carried out upon the premises of or on behalf of any [consumer, supplier, owner or occupier], for the purpose of supply to such consumer, owner, [or occupier] except by an electrical contractor licensed in this behalf by the state Government and under the direct supervision of a person holding a certificate of competency [and by a person holding a permit] issued or recognized by the state Government:

